ಓ. ಎಸ್. ನಂಃ 102/2007

ಡಿ . ಡಬ್ಲ್ಯೂಃ 1

ದಿಃ01-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಎಸ್ ಜಿ ವಾದಿ ಪರ ವಕೀಲರಿಂದ ಃ

ಶಿವಮೊಗ್ಗ ಜಿಲ್ಲೆ ಸಾಗರ ತಾಲುಕ ಮಾರಲಗೋಡ ಗ್ರಾಮದಲ್ಲಿ ದಿ06-01-1965 ರಲ್ಲಿ ಜನಿಸಿರುತ್ತೇನೆ . ನಾನು 4 ನೇ ತರಗತಿ ಒದಿದ್ದೇನೆ. ದಿ15-06-1997 ರಂದು ನನ್ನ ಮದುವೆ ಆಗಿದೆ. ಸೊಂದಾ ಜೈನ ಮಠದಲ್ಲಿ ನನ್ನ ಮದುವೆ ಆಗಿದೆ. ಬೂಪಾಲಪ್ಪ ನೇಮಣ್ಣನವರ ಅವರನ್ನು ಮದುವೆ ಆಗಿದ್ದೇನೆ. ಅವರಿಗೆ 35-40 ವಯಸ್ಸು ಇತ್ತು. ಬೂಪಾಲಪ್ಪ ಅವರು ಯತ್ತಿನಹಳ್ಳಿ ಗ್ರಾಮ ಶಿಗ್ಗಾವ ತಾಲುಕನವರು. ನನ್ನ ಮದುವೆಯನ್ನು ಹಿರಿಯರು ಸೇರಿ ಅಂಗಡಿ ಈರಪ್ಪ , ಬಸವಂತಪ್ಪ ಮಾಗಿ , ಶೇಕಪ್ಪ , ಬರಮಗೌಡರ ಎಲ್ಲರೂ ಸೇರಿ ಮಾಡಿಸಿದರು. ನನ್ನ ಗಂಡ ಹುಲಿಕಟ್ಟಿಯಲ್ಲಿ ಕನ್ನಡ ಶಾಲೆ ಟೀಚರ ಆಗಿದ್ದರು. ನಾವು ಅಲ್ಲಿಯೇ ವಾಸ ಮಾಡುತಿದ್ದೆವು . ನನ್ನ ಮದುವೆ ಪೂರ್ವದಲ್ಲಿ ಹುಲಿಕಟ್ಟಿಯಲ್ಲಿ ಕೆಲಸ ಮಾಡುತಿದ್ದರು. ಅಲ್ಲಿ 7 ವರ್ಷ ವಾಸ ಇದ್ದೆವು. ಹುಲಿಕಟ್ಟಿಯನ್ನು 2003 ರಲ್ಲಿ ಬಿಟ್ಟೆವು ನಂತರ 2004 ರಲ್ಲಿ ಮುಗಳಿಕಟ್ಟಿಯಲ್ಲಿ ಕೆಲಸ ಮಾಡುತಿದ್ದರು. ಮುಗಳಿಕಟ್ಟಿಯಲ್ಲಿ 1 ವರ್ಷ ಇದ್ದೆವು . 2004 ರಲ್ಲಿ ಮುಗಳಿಕಟ್ಟಿ ಗ್ರಾಮವನ್ನು ಬಿಟ್ಟೆವು. ನಂತರ 11 ತಿಂಗಳ ಹುಷಾರು ಇರಲಿಲ್ಲ ಆಸ್ಪತ್ರೆಗೆ ಹೋಗಿ ಬಂದು ಮಾಡುತಿದ್ದರು ಆಗ ಮುಗಳಿಕಟ್ಟಿಯಲ್ಲಿ ಕೆಲಸ ಮಾಡುತಿದ್ದರು. ಮುಗಳಿಕಟ್ಟಿ ಮತ್ತು ಹುಲಿಕಟ್ಟಿಯಲ್ಲಿ ವಾಸ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೆನೆ. ಮುಗಳಿಕಟ್ಟಿ ಮತ್ತು ಹುಲಿಕಟ್ಟಿಯಲ್ಲಿ ವಾಸ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೆನೆ ಎಂದು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಹುಲಿಕಟ್ಟಿಯಲ್ಲಿದ್ದ ಗುರುತಿನ ಚೀಟಿ ನಂಬರ ನನಗೆ ನೆನಪಿಲ್ಲ. ಪಡಿತರ ಚೀಟಿ ಎಲ್ಲಿಯದ್ದು ಇತ್ತು ಎಂದರೆ ಸರಕಾರಿ ನೌಕರಿಯಲ್ಲಿ ಇದ್ದ ಕಾರಣ ರೇಶನ ನೀಡುತ್ತಿರಲಿಲ್ಲ.ಮುಗಳಿಕಟ್ಟಿ ಮತ್ತು ಹುಲಿಕಟ್ಟಿಯಲ್ಲಿ ಪಡಿತರ ಚೀಟಿ ಮತ್ತು ಗುರತಿನ ಚೀಟಿ ಎರಡೂ ಮಾಡಿಸಿಕೊಂಡಿದ್ದೆನೆ.ಮುಗಳಿಕಟ್ಟಿ ಮತ್ತು ಹುಲಿಕಟ್ಟಿಯಲ್ಲಿ ವಾಸ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೆನೆ ಎಂದು ನಾನು ಸುಳ್ಳು ಹೇಳುತಿದ್ದೇನೆ ಎಂದರೆ

ಸರಿಯಲ್ಲ. ಸಾಕ್ಷಿಗೆ ಈಗ ಒಂದು ಗುರುತಿನ ಚೀಟಿ ತೋರಿಸಿದ್ದು ನನ್ನದು ಎಂದು ಗುರುತಿಸಿದ ಮೇರೆಗೆ ಅದನ್ನು ನಿಪಿ-63 ಎಂದು ಗುರುತಿಸಲಾಯಿತು. ಗುರುತಿನ ಚೀಟಿಯನ್ನು ನನ್ನ ಗಂಡ ತೀರಿಕೊಂಡ ಮೇಲೆ ಪುನಃ ಯತ್ತಿನಹಳ್ಳಿಯಲ್ಲಿ ಮಾಡಿಸಿದ್ದೇನೆ. ಹುಲಿಕಟ್ಟಿ ಮತ್ತು ಮುಗಳಿಕಟ್ಟಿಯ ಗುರುತಿನ ಚೀಟಿ ಇರುವುದಿಲ್ಲ ಎಂದರೆ ಸರಿ .ನಿಪಿ-63 ದಿ.10-07-2015 ರಂದು ಮಾಡಿದ ಗುರುತಿನ ಚೀಟಿ ಎಂದರ ಸರಿ. ನನ್ನ ಬಳಿ 5 ಗುರುತಿನ ಚೀಟಿ ಇದ್ದು ಊರು ಬದಲಾಯಿಸಿದಂತೆ ಗುರುತಿನ ಚೀಟಿ ಬದಲಾಗಿದೆ. ಆದಾರ ಕಾರ್ಡ ಪಡಿತರ ಚೀಟಿ ಗುರುತಿನ ಚೀಟಿ ಕೊರ್ಟ ಕೇಸ ದಾಖಲೆಗಳು , ಕೆ ಎ ಟಿ ಕೇಸ ದಾಖಲೆಗಳು , ವಿಜಯ ಬ್ಯಾಂಕ ನೋಟಿಸ ಕೇಸ , ದವಾಖಾನೆ ದಾಖಲೆಗಳು ಮುಂತಾದವು ಹಾಜರುಪಡಿಸಿದ್ದೇನೆ. ನನ್ನ ಗಂಡನಿಗೆ ಕಿವಿಯಲ್ಲಿ ಒಂದು ಹುಳ ಹೋಗಿದ್ದು 2005 ರಲ್ಲಿ ಶಸ್ತ್ರಚಿಕಿತ್ಸೆ ಮಾಡಿದ್ದರು ,ನಿಮಾನ್ಸಗೆ ಕಳುಹಿಸಿದರು ಆಗಲೂ ಹುಷಾರಾಗಲಿಲ್ಲ, ಕಿಮ್ಸಗೆ ಬಂದೆವು ತಲೆಗೆ ಇನ್ಪೆಕ್ಷನ್‌ಆಗಿ ತೀರಿಕೊಂಡರು. ಶಸ್ತ್ರಚಿಕಿತ್ಸೆ ಆದ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.ಆರ ಬಿ ಹಿರೇಮಠ ವೈದ್ಯರ ಹತ್ತಿರಚಿಕಿತ್ಸೆ ಪಡೆದವು, ನಂತರ 2005 ರಲ್ಲಿ ನಿಮಾನ್ಸ ಕಳುಹಿಸಿದರು. ನಿಮಾನ್ಸಕಳುಹಿಸಿದ ನಂತರ ಅಲ್ಲಿ 3 ತಿಂಗಳು ದಾಖಲಾಗಿದ್ದೆವು. ಅಲ್ಲಿ ಟೆಸ್ಟ ಮಾಡಿ ಕೀವುಗಳನ್ನು ತೆಗೆದು ನೋಡಿ ಹುಷಾರಾಗುವುದಿಲ್ಲ ಎಂದು ಕಳುಹಿಸಿದರು.ತಿಂಗಳು ನೆನಪಿಲ್ಲ. ಕಿಮ್ಸ 2005 ರಲ್ಲಿ 2-3 ತಿಂಗಳ ದಾಖಲಾಗಿದ್ದೆವು . ಕಿಮ್ಸನಲ್ಲಿ ನನ್ನ ಗಂಡ ಬದುಕುವಿದಿಲ್ಲ ಎಂದು ಹೇಳಿದ್ದು ಮನೆಗೆ ಬಂದು 8 ದಿನಕ್ಕೆ ತೀರಿಕೊಂಡಿರುತ್ತಾರೆ. 2005 ರಲ್ಲಿ ನನ್ನ ಗಂಡನ ಮಾನಸಿಕ ಸ್ಥಿತಿ ಸರಿಯಾಗಿ ಇತ್ತು . ಮೊದಲನೆ ಚಿಕಿತ್ಸೆ ಆದ ಮೇಲೆ ಹುಷಾರು ಇರಲಿಲ್ಲ. 2005 ರಲ್ಲಿ 2 ತಿಂಗಳು ಕೆಲಸ ಮಾಡಿದ್ದಾರೆ ನಂತರ ಆಸ್ಪತ್ರೆಗೆ ದಾಖಲಾದರು. 2005 ರಲ್ಲಿ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದರೆ ಸರಿಯಲ್ಲ . 2005 ರಲ್ಲಿ ನಿಮಾನ್ಸಗೆ ಕರೆದುಕೊಂಡು ಹೋದ ನಂತರ ಊಟ ತಿಂಡಿ ಮಾಡದಂತೆ ಆದರು. ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಬಿಲ್ ಮಾತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಡಿ-20 ರಿಂದ 25 ರವರೆಗೆ ಬಿಲಗಳು ಮಾತ್ರ ಇದೆ ಎಂದರೆ ಸರಿ. 2003 ರಿಂದ ನನ್ನ ಗಂಡನಿಗೆ ಹುಷಾರು ಇರಲಿಲ್ಲ ಎಂದರೆ ಸರಿಯಲ್ಲ . 2004 ರಿಂದ ಬಿಲ್ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.ನಿಡಿ-21 2004 ರ ಬಿಲ ಇದೆ ಎಂದರೆ ಸರಿಯಲ್ಲ. 07-06-2005 ರಲ್ಲಿ ನನ್ನ ಗಂಡ ತೀರಿಕೊಂಡಿದ್ದಾರೆ. ನಿಡಿ-21 ಅದು ಕಿದವಾಯಿ ಮೆಮೊರಿಯಲ್ ದವಾಖಾನೆ 2004 ರಸೀದಿ ಹಾಜರುಪಡಿಸಿದ್ದನೆ ಎಂದರೆ ಸರಿ. 24.01.2005 ರಲ್ಲಿ ನಿಮಾನ್ಸ ನಿ.ಡಿ-22 ಹಾಜರು

ಪಡಿಸಿದ್ದರು ಎಂದರೆ ಸರಿ . ನಿ.ಡಿ-23 ರಶೀದಿ ಹಾಜರು ಪಡಿಸಿದ್ದೇನೆ ಎಂದರೆ ಸರಿ. ನ್ನ ಗಂಡನಿಗ ತಲೆಗೆ ಸಂಬಂಧಪಟ್ಟಂತೆ ಕಾಯಲೆ ಪ್ರಕಾರ ಅವುಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿ .ನಿಡಿ-25 ನಿಮಾನ್ಸ ಅವರು ನೀಡಿದ ರಸೀದಿ ಎಂದರೆ ಸರಿ. ನನ್ನ ಗಂಡ ಯಾವಾಗ ಡಿಶ್ಚಾರ್ಜ ಆದರು ಎಂದು ನನಗೆ ನೆನಪಿಲ್ಲ. ರೋಗಿ ದಾಖಲಾದ ನಂತರ Discharge summary ಕೊಡುತ್ತಾರೆ ಎಂದರೆ ಸರಿ. ಆ ಪ್ರಕಾರ ದಾಖಲಾತಿ ಮತ್ತು ಡಿಶ್ಚಾರ್ಜ ಆದ ಕುರಿತು ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ ಅವುಗಳನ್ನು ತಂದು ಹಾಜರುಪಡಿಸುತ್ತೇನೆ. ನನಗೆ discharge summary ನಿಡಿದ್ದಾರೆ ಎಂದರೆ ಸರಿ. ನನ್ನ ಗಂಡದ ಮಾನಸಿಕ ಸ್ಥಿತಿ ಮುಚ್ಚಿಡಲು Discharge summary ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮದುವೆ ಆಗಿದ್ದೇನೆ ಎಂದು ಸಂಬಂದಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡ ಬಿ ಇ ಒ ಕಚೇರಿ ಮತ್ತು ಇತರೆ ಸಂಬಂದಪಟ್ಟ ಇಲಾಖೆಗಳಲ್ಲಿ ಮದುವೆ ಆದ ಬಗ್ಗ ದಾಖಲಾತಿಗಳನ್ನು ನೀಡಿದ್ದಾರೆ. ಕೆ ಜಿ ಐ ಡಿ ಗೆ ಯಾವಾಗ ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ.ಬಿ ಇ ಒ ಅವರಿಗೆ ನನ್ನ ಗಂಡ ತೀರಿಕೊಂಡ ನಂತರ ಜುಲೈನಲ್ಲಿ ಅರ್ಜಿ ನಿಡಿದ್ದೆನೆ. ನನ್ನ ಗಂಡ ತೀರಿಕೊಂಡ ನಂತರ ನಿಮ್ಮ ನಾಮಿನಿ ಇದೆ ಎಂದು ಹೇಳಿದರು. Service register ನಲ್ಲಿ ನನ್ನ ನಾಮಿನಿ ಇದೆ ಎಂದು ಹೇಳಿದರು.Service register ನಲ್ಲಿ ನನ್ನ ನಾಮಿನಿ ಇದ್ದ ಬಗ್ಗ ಜುಲೈ 2005 ರಲ್ಲಿ ಗೊತ್ತಾಯಿತು. ನನ್ನ ಗಂಡ ನಾಮೀನಿ ಮಾಡಿದ ಬಗ್ಗ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ . ಸದರಿ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಬಂದಿಲ್ಲ ವಾದಿಯವರು ಬಂದಿದ್ದಾರೆ.ನಾನು 2007 ರಲ್ಲಿ ದಾವೆ ಮಾಡಿದ್ದೆನೆ.

ಒ ಎಸ ನಂಬರ 32/2007 ನಾನೇ ಮಾಡಿದ್ದೆ . ಪದ್ಮರಾಜ ಬಂದು ನನಗೆ ಮಕ್ಕಳು ಇಲ್ಲ ನನ್ನ ಗಂಡನ ಪಿಂಚಣಿ ಮತ್ತು ಆಸ್ತಿ ಅವನಿಗೆ ಬೇಕು ಎಂದು ತಂಟೆ ಮಾಡಿದ ಕಾರಣ ಕೇಸ ಮಾಡಿದ್ದೆ . ಪದ್ಮರಾಜ ಅವರು ನನ್ನ ಗಂಡ ತೀರಿಕೊಂಡ 2-3 ತಿಂಗಳನಲ್ಲಿ ತಂಟೆ ಮಾಡಿದ್ದ. ಈ ದಾವೆಯನ್ನು ಯಾವಾಗ ಮಾಡಿದ್ದೆ ಎಂದು ನನಗೆ ನೆನಪಿಲ್ಲ . ನಾನು ಪದ್ಮರಾಜ ಇಬ್ಬರು ಒ ಎಸ ನಂಬರ 32/2007 ರಲ್ಲಿ ರಾಜಿ ಮಾಡಿಕೊಂಡೆವು. ಒ ಎಸ ನಂಬರ 32/2007 ಸಂಬಂದಪಟ್ಟಂತೆ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೆನೆ ಎಂದರೆ ಸಾಕ್ಷಿಯು ಗುರುತಿನ ಚೀಟಿ ನೀಡಿದ್ದೆನೆ ಎಂದರು. ಒ ಎಸ ನಂಬರ 32/2007 ನ್ನು ಗಂಜೇನಣವರ ವಕೀಲರು

ನಡೆಸುತಿದ್ದರು. ಒ ಎಸ ನಂಬರ 32/2007 ತೀರ್ಪು ಆದ ನಂತರ ಸದರಿ ತೀರ್ಪನ್ನು ತಹಶಿಲ್ದಾರ ದುಂಡಶಿ, ನೆಮ್ಮದಿ ಕೇಂದ್ರ, ಹೊಸುರು ಪಂಚಾಯಿತಿ, ಬಿ ಇ ಒ ಕಚೇರಿಗೆ ನೀಡಿದ್ದನೆ. ಯಾವ ದಿನಾಂಕದಂದು ಯಾವ ಕಚೇರಿಗೆ ನೀಡಿದ್ದೆನೆ ಎಂದು ನೆನಪಿಲ್ಲ. ಒ ಎಸ ನಂಬರ 32/2007 ವಿಚಾರಣೆ ಆಗಿ 1 ವರ್ಷದೊಳಗೆ ರಾಜಿ ಆಯಿತು. ಒ ಎಸ ನಂಬರ 32/2007 ತಿರ್ಪಿನ ಪ್ರಕಾರ ಎಲ್ಲಾ ಬದಲಾವಣೆ ಮಾಡಿಕೊಂಡೆ ಎಂದರೆ ಸರಿ. ಅರ್ಜಿ ಕೊಟ್ಟ ನಂತರ ಸ್ವಿಕೃತಿಯನ್ನು ಪಡೆದುಕೊಂಡಿದ್ದೆ ಅವುಗಳನ್ನು ಹಾಜರುಪಡಿಸಿದ್ದೆನೆ. ಸದರಿ ಸ್ವಿಕೃತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪದ್ಮರಾಜ ಸೇರಿಕೊಂಡು ಒಂದು ಸುಳ್ಳು ದಾವೆ ಮಾಡಿದ್ದೆನೆ ಎಂದರೆ ಸರಿಯಲ್ಲ . ನಾನು ಮತ್ತು ಪದ್ಮರಾಜ ಮಿಲಾಪಿಯಾಗಿ ಕೊಟ್ಟಿ ಡಿಕ್ರಿ ಮಾಡಿಕೊಂಡೆವು ಎಂದರೆ ಸರಿಯಲ್ಲ .

ಒ ಎಸ 102/2007 ನನ್ನ ವಿರುದ್ದ ಈ ದಾವೆಯ ವಾದಿಯವರು ಮಾಡಿದ್ದಾರೆ ಎಂದರೆ ಸರಿ. ಒ ಎಸ ನಂಬರ 32/2007 ಕೊಟ್ಟಿ ಡಿಕ್ರಿ ರದ್ದು ಮಾಡಿಸಲು ಸದರಿ ದಾವೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.